**ಕರ್ನಾಟಕ ಸರ್ಕಾರ**

*ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.*

ಸಂಖ್ಯೆ: ಪಪೂಶಿಇ/ ಶೈ.ಶಾ-4/ಮಾಧ್ಯಮ-2/2017-18 ದಿನಾಂಕ: 1-09-2017.

# ಸುತ್ತೋಲೆ

**ವಿಷಯಃ ಪದವಿ ಪೂರ್ವ ವ್ಯಾಸಂಗದಲ್ಲಿ ಶಿಕ್ಷಣ ಮಾಧ್ಯಮ ಕುರಿತು.**

-*-

1) ಕರ್ನಾಟಕ ಶಿಕ್ಷಣ ಅಧಿನಿಯಮ 1983 ರ ಅನುಚ್ಛೇಧ 21 (ಬಿ) ಪ್ರಕಾರ ಮತ್ತು ಪರಿಚ್ಛೇಧ 2 ರ ಕಲಂ 4 ರಂತೆ ಹಾಗೂ ಕರ್ನಾಟಕ ಪದವಿ ಪೂರ್ವ ಶಿಕ್ಷಣ ರಾಜ್ಯಮಟ್ಟದ ಸಾರ್ವತ್ರಿಕ ಪರೀಕ್ಷೆ ನಿಯಮಗಳು 1997 ರ ನಿಯಮಗಳಂತೆ ಪದವಿ ಪೂರ್ವ ಶಿಕ್ಷಣ ಇಲಾಖೆಯು ಸಾರ್ವತ್ರಿಕ ಪರೀಕ್ಷೆ ಆಯೋಜಿಸುತ್ತದೆ. ಸದರಿ ನಿಯಮ 5 ರಂತೆ, ಸಾರ್ವತ್ರಿಕ ಪರೀಕ್ಷೆಗೆ ಹಾಜರಾಗಲು ಬಯಸುವ ಪ್ರತಿಯೊಬ್ಬ ವಿದ್ಯಾರ್ಥಿಯೂ ಪದವಿ ಪೂರ್ವ ಶಿಕ್ಷಣ ಇಲಾಖೆಯು ನಿಗದಿಪಡಿಸಿದ ನಮೂನೆಯಲ್ಲಿ ತನ್ನ ಅರ್ಜಿಯನ್ನು ಸಲ್ಲಿಸಬೇಕು.

2) ಪದವಿ ಪೂರ್ವ ಶಿಕ್ಷಣ ಇಲಾಖೆಯು ನಿಗದಿಪಡಿಸಿದ ಪಠ್ಯಕ್ರಮವನ್ನು ಅನುಸರಿಸುತ್ತಿರುವ ಪದವಿ ಪೂರ್ವ ಕಾಲೇಜುಗಳು ಸಾಮಾನ್ಯವಾಗಿ ಕನ್ನಡ ಅಥವಾ ಆಂಗ್ಲ ಮಾಧ್ಯಮದಲ್ಲಿ ಬೋಧನೆಯನ್ನು ನೀಡುತ್ತಿವೆ. ಸಾರ್ವತ್ರಿಕ ಪರೀಕ್ಷೆಯಲ್ಲಿ ಈ ಎರಡೂ ಮಾಧ್ಯಮಗಳಲ್ಲಿ ವಿದ್ಯಾರ್ಥಿಗಳು ಉತ್ತರಿಸಿದ ಉತ್ತರ ಪತ್ರಿಕೆಗಳ ಪ್ರಕಾರ ಇಲಾಖೆಯು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡುತ್ತದೆ. ಆದಾಗ್ಯೂ, ಇತ್ತೀಚಿನವರೆಗೂ ಇಲಾಖೆಯು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡ ಶಿಕ್ಷಣ ಮತ್ತು ಬೋಧನಾ ಮಾಧ್ಯಮವನ್ನು ಪಿಯು ಪ್ರಮಾಣ ಪತ್ರಗಳಲ್ಲಿ/ಉತ್ತೀರ್ಣ ಅಂಕಪಟ್ಟಿಗಳಲ್ಲಿ ನಮೂದಿಸುತ್ತಿರಲಿಲ್ಲ. ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ವಿದ್ಯಾರ್ಥಿಗಳ ಎಸ್ಎಸ್ಎಲ್‌ಸಿ ಅಂಕಪಟ್ಟಿಗಳಲ್ಲಿ ಪರೀಕ್ಷಾ ಮಾಧ್ಯಮನ್ನು ನಮೂದಿಸುತ್ತಿರುವುದನ್ನು ಗಮನಿಸಬಹುದಾಗಿದೆ.

3) 2017 ರ ವರ್ಷದಲ್ಲಿ ಆಯೋಜಿಸಿರುವ ಸಾರ್ವತ್ರಿಕ ಪರೀಕ್ಷೆಯ ಪ್ರಮಾಣ ಪತ್ರದಲ್ಲಿ ಇಲಾಖೆಯು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡ ಅಧ್ಯಯನ ಮಾಧ್ಯಮನ್ನು ನಮೂದಿಸುವುದರಿಂದ ವಿದ್ಯಾರ್ಥಿಗಳಲ್ಲಿ ಪಾರದರ್ಶಕತೆ ಮತ್ತು ಕೌಶಲ್ಯತೆಯನ್ನು ವೃದ್ಧಿಸುತ್ತದೆ. ಇಲಾಖೆಯು ಈ ಸುಧಾರಣೆಯನ್ನು ಮುಂದುವರೆಸಲು ಉದ್ದೇಶಿಸಿದೆ. ವಿದ್ಯಾರ್ಥಿಗಳು ಸಾರ್ವತ್ರಿಕ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಮತ್ತು ಅಂತಿಮವಾಗಿ ಪರೀಕ್ಷೆ ಬರೆಯುವಾಗ ಈ ಸುಧಾರಣೆಗೆ ಸ್ಥಿರತೆ ತರಲು. ವಿದ್ಯಾರ್ಥಿಗಳು ಪಿಯು ಪ್ರವೇಶಾತಿಯನ್ನು ಪಡೆಯುವಾಗಲೇ ಬೋಧನೆ ಮತ್ತು ಪರೀಕ್ಷಾ ಮಾಧ್ಯಮನ್ನು ಆಯ್ಕೆ ಮಾಡಿಕೊಳ್ಳಲು ಒಂದು ವಿಧಾನವನ್ನು ನಿರ್ದಿಷ್ಟಪಡಿಸುವುದು ಸೂಕ್ತವಾಗಿರುತ್ತದೆ.

4) ಮೇಲಿನ ಅಂಶಗಳ ಹಿನ್ನಲೆಯಲ್ಲಿ. ಈ ಕೆಳಕಂಡಂತೆ ವಿಧಾನವನ್ನು ನಿರ್ದಿಷ್ಟಪಡಿಸಿದೆ:-

**ಪ್ರಥಮ ವರ್ಷದ ಪದವಿ ಪೂರ್ವ ಶಿಕ್ಷಣ:**

ಎ) ಒಬ್ಬ ವಿದ್ಯಾರ್ಥಿಯು ಪ್ರಥಮ ವರ್ಷದ ಪಿಯು ಶಿಕ್ಷಣಕ್ಕೆ ಪ್ರವೇಶಾತಿ ಪಡೆಯುವಾಗ ಆಯಾ ಕಾಲೇಜಿನಲ್ಲಿ ಬೋಧಿಸಲು ಅವಕಾಶವಿರುವ ಮಾಧ್ಯಮದ ಲಭ್ಯತೆಗೆ ಒಳಪಟ್ಟು ಯಾವ ಮಾಧ್ಯಮದಲ್ಲಿ ಶಿಕ್ಷಣ ಪಡೆಯಲು ಬಯಸುತ್ತಾನೆಂಬುದನ್ನು ಅಂದರೆ ಕನ್ನಡ ಅಥವಾ ಆಂಗ್ಲ ಮಾಧ್ಯಮವೆಂಬುದನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು. ಹಾಗೆ ಮಾಡಿಕೊಂಡ ಆಯ್ಕೆಯ ಮಾಧ್ಯಮವನ್ನು ದಾಖಲಾತಿ ಸಂದರ್ಭದಲ್ಲಿ ನಮೂದಿಸತಕ್ಕದ್ದು. ಆದಾಗ್ಯೂ ಸಂಬಂಧಪಟ್ಟ ಕಾಲೇಜುಗಳು ಹಾಗೆ ಆಯ್ಕೆ ಮಾಡಿಕೊಂಡ ಮಾಧ್ಯಮವನ್ನು ಪ್ರಥಮ ವರ್ಷದ ಶಿಕ್ಷಣ ಪ್ರಾರಂಭಗೊಂಡ ಎರಡು ತಿಂಗಳೊಳಗೆ ಬದಲಾಯಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸತಕ್ಕದ್ದು.

ಬಿ) ಸಂಬಂಧಪಟ್ಟ ಕಾಲೇಜುಗಳು ನಡೆಸುವ ಪ್ರಥಮ ವರ್ಷದ ಪಿಯು ಪರೀಕ್ಷೆಯಲ್ಲಿ ಭಾಷಾ ವಿಷಯಗಳನ್ನು ಹೊರತುಪಡಿಸಿ, ಪ್ರವೇಶಾತಿ ಸಂದರ್ಭದಲ್ಲಿ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡ ಮಾಧ್ಯಮದಲ್ಲಿಯೇ ಪ್ರಶ್ನೆಗಳಿಗೆ ಉತ್ತರಿಸತಕ್ಕದ್ದು.

ಸಿ) ಸಂಬಂಧಪಟ್ಟ ಕಾಲೇಜುಗಳು ನಡೆಸುವ ಪ್ರಥಮ ವರ್ಷದ ಪಿಯು ಪರೀಕ್ಷೆಗೆ ಭಾಷಾ ವಿಷಯಗಳನ್ನು ಹೊರತುಪಡಿಸಿ, ವಿದ್ಯಾರ್ಥಿಯು ಪ್ರವೇಶಾತಿ ಸಂದರ್ಭದಲ್ಲಿ ಆಯ್ಕೆ ಮಾಡಿಕೊಂಡ ಮಾಧ್ಯಮದಲ್ಲಿಯೇ ಪ್ರಶ್ನೆ ಪತ್ರಿಕೆಗಳನ್ನು ಒದಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಎರಡೂ ಮಾಧ್ಯಮಗಳಲ್ಲಿ/ದ್ವಿಭಾಷಾ ಪ್ರಶ್ನೆ ಪತ್ರಿಕೆಗಳನ್ನು ಒದಗಿಸತಕ್ಕದ್ದಲ್ಲವೆಂದು ಪುನರುಚ್ಚರಿಸಿದೆ.

ಡಿ) ವಿದ್ಯಾರ್ಥಿಯು ಆಯ್ಕೆ ಮಾಡಿಕೊಂಡ ಮಾಧ್ಯಮದಲ್ಲಿಯೇ ಉತ್ತರಿಸಿದ ಉತ್ತರ ಪತ್ರಿಕೆಗಳನ್ನು ಮಾತ್ರ ಮೌಲ್ಯಮಾಪನ ಮಾಡತಕ್ಕದ್ದು. ಕನ್ನಡ ಅಥವಾ ಆಂಗ್ಲದಲ್ಲಿ ವ್ಯಕ್ತಪಡಿಸಿದ ತಾಂತ್ರಿಕ ಪದಗಳನ್ನು ಹೊರತುಪಡಿಸಿ, ಯಾವುದೇ ಕಾರಣಕ್ಕೂ ಎರಡೂ ಮಾಧ್ಯಮಗಳಲ್ಲಿ ಅಥವಾ ದ್ವಿಭಾಷೆಯಲ್ಲಿ ಉತ್ತರಿಸಿದ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲು ಪರಿಗಣಿಸತಕ್ಕದ್ದಲ್ಲ.

**ದ್ವಿತೀಯ ವರ್ಷದ ಪದವಿ ಪೂರ್ವ ಶಿಕ್ಷಣ:**

ಇ) ಪ್ರಥಮ ವರ್ಷದ ಪ್ರವೇಶಾತಿಯಲ್ಲಿ ಆಯ್ಕೆ ಮಾಡಿದ ಮಾಧ್ಯಮದಲ್ಲಿಯೇ ದ್ವಿತೀಯ ಪಿಯು ಮುಂದುವರೆಸುವುದನ್ನು ಇಲಾಖೆಯು ಅಪೇಕ್ಷಿಸುತ್ತದೆ. ಆದಾಗ್ಯೂ ಸಂಬಂಧಪಟ್ಟ ಕಾಲೇಜುಗಳು ಪ್ರಥಮ ವರ್ಷದ ಪಿಯುನಲ್ಲಿ ಆಯ್ಕೆ ಮಾಡಿಕೊಂಡ ಮಾಧ್ಯಮವನ್ನು ದ್ವಿತೀಯ ಪಿಯು ವರ್ಷದ ಶಿಕ್ಷಣ ಪ್ರಾರಂಭಗೊಂಡ ಒಂದು ವಾರದೊಳಗೆ ಮಾಧ್ಯಮದ ಲಭ್ಯತೆಗೆ ಒಳಪಟ್ಟು ಬದಲಾಯಿಸಿಕೊಳ್ಳಲು

ವಿದ್ಯಾರ್ಥಿಗಳಿಗೆ ಅವಕಾಶಕಲ್ಪಿಸತಕ್ಕದ್ದು. ಈ ಅವಧಿಯ ನಂತರ ಯಾವುದೇ ಕಾರಣಕ್ಕೂ ಮಾಧ್ಯಮ ಬದಲಾವಣೆಗೆ ಅವಕಾಶ ಇರುವುದಿಲ್ಲ.

ಎಫ್) ಇಲಾಖೆಯು ನಡೆಸುವ ಸಾರ್ವತ್ರಿಕ ಪರೀಕ್ಷೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ಭಾಷಾ ವಿಷಯಗಳನ್ನು ಹೊರತುಪಡಿಸಿ ಪ್ರವೇಶಾತಿ ಸಂದರ್ಭದಲ್ಲಿ ಆಯ್ಕೆ ಮಾಡಿಕೊಂಡ ಮಾಧ್ಯಮದಲ್ಲಿಯೇ ಪ್ರಶ್ನೆಗಳಿಗೆ ಉತ್ತರಿಸತಕ್ಕದ್ದು.

ಜಿ) ಇಲಾಖೆಗೆ ಅಂತರ್ಜಾಲದ ಮೂಲಕ ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಪ್ರತಿಯೊಬ್ಬ ವಿದ್ಯಾರ್ಥಿಯು ಆಯ್ಕೆ ಮಾಡಿಕೊಂಡ ಶಿಕ್ಷಣ ಮಾಧ್ಯಮವನ್ನು ಸ್ಪಷ್ಟವಾಗಿ ನಮೂದಿಸುವುದು ಪ್ರಾಂಶುಪಾಲರ ಆದ್ಯ ಕರ್ತವ್ಯ ಮತ್ತು ಜವಾಬ್ದಾರಿಯಾಗಿರುತ್ತದೆ. ಹಾಗೆ ಆಯ್ಕೆ ಮಾಡಿಕೊಂಡ ಶಿಕ್ಷಣ ಮಾಧ್ಯಮದ ಕುರಿತು ಪ್ರತಿ ವಿದ್ಯಾರ್ಥಿಯಿಂದ **ಘೋಷಣಾ ಪ್ರಮಾಣ ಪತ್ರವನ್ನು ಪಡೆದು, ಕಾಲೇಜಿನಲ್ಲಿ ದಾಖಲೆಯಾಗಿ ಕಾಯ್ದಿಡತಕ್ಕದ್ದು.**

ಹೆಚ್) ಇಲಾಖೆಯು ನಡೆಸುವ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಭಾಷಾ ವಿಷಯಗಳನ್ನು ಹೊರತುಪಡಿಸಿ, ಪ್ರಶ್ನೆ ಪತ್ರಿಕೆಗಳನ್ನು ಪ್ರತಿಯೊಬ್ಬ ವಿದ್ಯಾರ್ಥಿಯು ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಆಯ್ಕೆ ಮಾಡಿಕೊಂಡ ಮಾಧ್ಯಮದಲ್ಲಿಯೇ ಉತ್ತರಿಸತಕ್ಕದ್ದು.

ಐ) ಇಲಾಖೆಯು ಸಾರ್ವತ್ರಿಕ ಪರೀಕ್ಷೆಯಲ್ಲಿ ದ್ವಿತೀಯ ವರ್ಷದ ಪಿಯು ಪರೀಕ್ಷೆಗೆ ಭಾಷಾ ವಿಷಯಗಳನ್ನು ಹೊರತುಪಡಿಸಿ, ವಿದ್ಯಾರ್ಥಿಯು ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯಲ್ಲಿ ಆಯ್ಕೆ ಮಾಡಿಕೊಂಡ ಮಾಧ್ಯಮದಲ್ಲಿಯೇ ಪ್ರಶ್ನೆ ಪತ್ರಿಕೆಗಳನ್ನು ಒದಗಿಸಬೇಕು. ಯಾವುದೇ ಕಾರಣಕ್ಕೂ ಎರಡೂ ಮಾಧ್ಯಮಗಳಲ್ಲಿ /ದ್ವಿಭಾಷಾ ಪ್ರಶ್ನೆ ಪತ್ರಿಕೆಗಳನ್ನು ಒದಗಿಸತಕ್ಕದ್ದಲ್ಲವೆಂದು ಪುನರುಚ್ಚರಿಸಿದೆ.

ಜೆ) ಇಲಾಖೆಯು ವಿದ್ಯಾರ್ಥಿ ಆಯ್ಕೆ ಮಾಡಿಕೊಂಡ ಮಾಧ್ಯಮದಲ್ಲಿಯೇ ಉತ್ತರಿಸಿದ ಉತ್ತರ ಪತ್ರಿಕೆಗಳನ್ನು ಮಾತ್ರ ಮೌಲ್ಯಮಾಪನ ಮಾಡತಕ್ಕದ್ದು. ಕನ್ನಡ ಅಥವಾ ಆಂಗ್ಲದಲ್ಲಿ ವ್ಯಕ್ತಪಡಿಸಿದ ತಾಂತ್ರಿಕ ಪದಗಳನ್ನು ಹೊರತುಪಡಿಸಿ, ಯಾವುದೇ ಕಾರಣಕ್ಕೂ ಎರಡೂ ಮಾಧ್ಯಮಗಳಲ್ಲಿ ಅಥವಾ ಎರಡೂ ಭಾಷೆಯಲ್ಲಿ ಉತ್ತರಿಸಿದ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಅಂಗೀಕರಿಸತಕ್ಕದ್ದಲ್ಲ.

ಕೆ) ಇಲಾಖೆಯು 2018 ರ ಸಾರ್ವತ್ರಿಕ ಪರೀಕ್ಷೆ ನಡೆಸುವಾಗ ಪ್ರಾರಂಭದಿಂದ ವಿದ್ಯಾರ್ಥಿಗಳ ದ್ವಿತೀಯ ಪಿಯು ಪರೀಕ್ಷಾ ಪ್ರವೇಶ ಪತ್ರಗಳಲ್ಲಿ ಮತ್ತು ಪಿಯು ಪ್ರಮಾಣ ಪತ್ರಗಳಲ್ಲಿ ಪರೀಕ್ಷಾ ಮಾಧ್ಯಮವನ್ನು ನಮೂದಿಸತಕ್ಕದ್ದು.

5) ಮೇಲಿನ ಶೈಕ್ಷಣಿಕ ವಿಧಾನವು 2017-18 ನೇ ಸಾಲಿನಿಂದ ಜಾರಿಗೆ ಬರತಕ್ಕದ್ದು ಮತ್ತು ಪಿಯುಸಿ ಯ ಮೊದಲ ವರ್ಷಕ್ಕೆ ಸಂಬಂಧಪಟ್ಟಂತೆ ಕಾಲೇಜುಗಳು ನಡೆಸುವ ಪರೀಕ್ಷೆಗೆ ಮತ್ತು ಇಲಾಖೆಯು ನಡೆಸುವ

ದ್ವಿತೀಯ ಪಿಯುಸಿ ಸಾರ್ವತ್ರಿಕ ಪರೀಕ್ಷೆಗೆ 2018 ರ ಅವಧಿಗೆ ಅನ್ವಯಿಸುತ್ತದೆ ಮತ್ತು ನಂತರದ ಮುಂದಿನ ವರ್ಷಗಳಲ್ಲಿಯೂ ಈ ವಿಧಾನವೂ ಮುಂದುವರೆಯುವುದು.

6) ಮೇಲಿನ ಕಂಡಿಕೆ 4 (ಎ) ಹಾಗೂ 4 (ಇ)ರಲ್ಲಿ ಪ್ರಥಮ ಹಾಗೂ ದ್ವಿತೀಯ ಪಿ.ಯು.ವಿದ್ಯಾರ್ಥಿಗಳಿಗೆ ಅಧ್ಯಯನ ಮಾಧ್ಯಮವನ್ನು ಆಯ್ಕೆ ಮಾಡಿಕೊಳ್ಳಲು ನಿಗದಿತ ಅಂತಿಮ ಅವಧಿಯನ್ನು ಸೂಚಿಸಲಾದಾಗ್ಯೂ ಸಹ 2017-18ರ ಅವಧಿಯಲ್ಲಿ ಮೊದಲ ಬಾರಿಗೆ ಪ್ರಥಮ ಪಿಯುಸಿ ಹಾಗೂ ದ್ವಿತೀಯ ಪಿ.ಯು.ಸಿ. ಅಧ್ಯಯನ ಮಾಡುವ ವಿದ್ಯಾರ್ಥಿಗಳು ತಮ್ಮ ಅಧ್ಯಯನ ಮಾಧ್ಯಮವನ್ನು 30ನೇ ಸೆಪ್ಟಂಬರ್ 2017 ರೊಳಗಾಗಿ ಬದಲಾಯಿಸಿಕೊಳ್ಳಬಹುದು.

7) ಪ್ರತಿ ವಿದ್ಯಾರ್ಥಿಯು ಆಯ್ಕೆ ಮಾಡಿಕೊಂಡ ಮಾಧ್ಯಮ ಕುರಿತು ಇಲಾಖೆಗೆ ಆನ್‌ಲೈನ್‌ನಲ್ಲಿ ಸರಿಯಾಗಿ ದಾಖಲಿಸಲ್ಪಟ್ಟಿದೆ ಎಂದು ಖಚಿತಪಡಿಸಿಕೊಳ್ಳುವ ಜವಾಬ್ದಾರಿಯು ಆಯಾ ಕಾಲೇಜಿನ ಪ್ರಾಂಶುಪಾಲರದ್ದಾಗಿರುತ್ತದೆ. ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡ ಅಧ್ಯಯನ ಮಾಧ್ಯಮವನ್ನು ಸರಿಯಾಗಿ ತೋರಿಸುವ ಮತ್ತು ಆನ್‌ಲೈನ್‌ನಲ್ಲಿ ದಾಖಲಿಸಿದ ಪರೀಕ್ಷೆಯ ವಿವರಗಳ ಕುರಿತು ಮುದ್ರಿತ ದಾಖಲೆಗಳನ್ನು ತೆಗೆದು, ಸಂರಕ್ಷಿಸಿಕೊಳ್ಳತಕ್ಕದ್ದು ಮತ್ತು ಪರೀಕ್ಷೆ ಮಾಧ್ಯಮವೂ ಸೇರಿದಂತೆ ಅರ್ಜಿಯಲ್ಲಿನ ವಿವರಗಳು ಸರಿಯಾಗಿರುವ ಬಗ್ಗೆ ಸಂಬಂಧಿಸಿದ ವಿದ್ಯಾರ್ಥಿಗಳಿಂದ ಸಹಿ ಪಡೆದು, ದೃಢಪಡಿಸಿಕೊಳ್ಳತಕ್ಕದ್ದು.

8) ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ವಿದ್ಯಾರ್ಥಿಗಳಿಗೆ ಮತ್ತು ಸಂಬಂಧಪಟ್ಟ ಎಲ್ಲಾ ಬೋಧನಾ ಸಿಬ್ಬಂದಿಗಳಿಗೆ ಈ ವಿಧಾನದ ಬಗ್ಗೆ ತಿಳಿಸಲು ನಿರ್ದೇಶಿಸಿದೆ.

1/9/17

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರ ಮುಖಾಂತರ ಎಲ್ಲಾ ಕಾಲೇಜಿನ ಪ್ರಾಂಶುಪಾಲರಿಗೆ- ಮುಂದಿನ ಕ್ರಮಕ್ಕಾಗಿ
2. ಇ-ಆಡಳಿತ ಶಾಖೆ-ಅಂತರಜಾಲದಲ್ಲಿ ಅಳವಡಿಸಲು

ಪ್ರತಿಯನ್ನು ಮಾಹಿತಿಗಾಗಿ

1. ಜಂಟಿ ನಿರ್ದೇಶಕರು ಶೈಕ್ಷಣಿಕ/ಪರೀಕ್ಷೆ/ಮಾ&ಅ, ಪಪೂಶಿಇಲಾಖೆ.
2. ನಿರ್ದೇಶಕರು ಆಪ್ತಶಾಖೆ
3. ಕಛೇರಿ ಪ್ರತಿ